**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಬೆಂಗಳೂರು ಗ್ರಾಮಾಂತರ ಜಿಲ್ಲೆ**
**2 ನೇ ಬ್ಲಾಕ್ ರಾಜಾಜಿನಗರ ಬೆಂಗಳೂರು-10**
**2023-24 ನೇ ಸಾಲಿನ ವೀರಗಾಥ 3.0 ಕಾರ್ಯಕ್ರಮದ ವರದಿ**

<table>
<tr><th>ಕ್ರ.ಸಂ</th><th>ವಿವರ</th></tr>
<tr><td>1</td><td>ಭಾರತ ಸರ್ಕಾರದ ರಕ್ಷಣಾ ಸಚಿವಾಲಯ ವು ಶಿಕ್ಷಣ ಸಚಿವಾಲಯದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗಳ ಸಹಯೋಗದೊಂದಿಗೆ ಶಾಲಾ ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.<br>ಉದ್ದೇಶ :<br><br>❖ ಶೌರ್ಯ ಪ್ರಶಸ್ತಿ ವಿಜೇತರ ಬಗ್ಗೆ ಅರಿವು ಮೂಡಿಸುವುದು.<br>❖ ಮಕ್ಕಳಲ್ಲಿ ರಾಷ್ಟ್ರಪ್ರೇಮ ಉದ್ದೀಪನಗೊಳಿಸುವುದು ಹಾಗೂ ಕ್ರಿಯಾತ್ಮಕ ಕೌಶಲ್ಯ ಬೆಳೆಸುವುದು<br>❖ ಸೇನಾವೃತ್ತಿಯನ್ನು ಗೌರವಿಸುವುದು.<br>❖ ದೇಶಕ್ಕಾಗಿ ದುಡಿಯುವ ಮನೋಭಾವನೆ ಮೂಡಿಸುವುದು.</td></tr>
<tr><td>2.</td><td>ಜಿಲ್ಲೆಯಲ್ಲಿ ಕಾರ್ಯಕ್ರಮದ ರೂಪುರೇಷೆ :<br><br>ಅದರಂತೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯು ದಿನಾಂಕ : 25/09/2023 ರಂದು ವೀರಗಾಥ 3.0 ಕಾರ್ಯಕ್ರಮದಡಿ ಶೌರ್ಯಪ್ರಶಸ್ತಿ ಪಡೆದ ಮೇಜರ್ ಶ್ರೀ.ಸಂಜಯ್ ಸಿಂಗ್ ಜಮ್ವಾಲ್ ರವರೊಂದಿಗೆ ಸಂವಾದ ಕಾರ್ಯಕ್ರಮವನ್ನು ಹೊಸಕೋಟೆ ತಾಲ್ಲೂಕಿನ CALD WELL ACADEMY ಶಾಲೆಯಲ್ಲಿ ಆಯೋಜಿಸಲಾಗಿತ್ತು.<br><br>ಸದರಿ ಕಾರ್ಯಕ್ರಮಕ್ಕೆ ಸರ್ಕಾರಿ ಪದವಿಪೂರ್ವ ಕಾಲೇಜು, ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಮತ್ತು ಸರ್ಕಾರಿ ಬಾಲಕರ ಪ್ರೌಢಶಾಲೆ ಹಾಗೂ ಶಾಲೆಯ ಸುಮಾರು 450 ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.<br><br>ಸದರಿ ಕಾರ್ಯಕ್ರಮದ ಆಯೋಜನೆಯನ್ನು ತಾಲ್ಲೂಕಿನ ಕಾರ್ಯಕ್ರಮದ ನೋಡಲ್ ಬಿ.ಆರ್.ಪಿರವರಾದ ಶ್ರೀಮತಿ.ಹೇಮಲತ ರವರ ಸಹಕಾರದೊಂದಿಗೆ ರೂಪಿಸಿಕೊಳ್ಳಲಾಯಿತು. ತಾಲ್ಲೂಕಿನ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರಸಮನ್ವಯಾಧಿಕಾರಿಗಳು ಮಾರ್ಗದರ್ಶನ ಮತ್ತು ಸಹಕಾರವನ್ನು ನೀಡಿದರು. ಕಾರ್ಯಕ್ರಮಕ್ಕೆ ದೇವನಹಳ್ಳಿ ತಾಲ್ಲೂಕಿನ ಕ್ಷೇತ್ರ ಸಮನ್ವಯಾಧಿಕಾರಿ ಶ್ರೀಮತಿ.ಮಂಜುಳ ಹಾಗೂ ಸದರಿ ಕಾರ್ಯಕ್ರಮದ ತಾಲ್ಲೂಕು ನೋಡಲ್ ಬಿ.ಆರ್.ಪಿ ಶ್ರೀಮತಿ. ಸವಿತರವರು ನೆಲಮಂಗಲ ತಾಲ್ಲೂಕಿನ ಸದರಿ ಕಾರ್ಯಕ್ರಮದ ತಾಲ್ಲೂಕು ನೋಡಲ್ ಬಿ.ಆರ್.ಪಿ. ಶ್ರೀಮತಿ.ಕವಿತರವರು ಹಾಗೂ ದೇವನಹಳ್ಳಿ ತಾಲ್ಲೂಕಿನ ಚನ್ನಹಳ್ಳಿ ಪ್ರೌಢಶಾಲೆಯ ಶ್ರೀ.ಮಹೇಶ್ ಶಿಕ್ಷಕರು ಆಗಮಿಸಿದ್ದರು.<br><br>ಬೆಳಗ್ಗೆ 11 ಗಂಟೆಗೆ ಆಗಮಿಸಿದ ಮೇಜರ್ ಶ್ರೀ. ಸಂಜಯ್ ಸಿಂಗ್ ಜಮ್ವಾಲ್ ರವರನ್ನು ಡಯಟ್ ನ ಪ್ರಾಂಶುಪಾಲರಾದ ಶ್ರೀಮತಿ. ಎಸ್.ಉಷಾಕುಮಾರಿ ರವರು ಹೂವಿನ ಬೊಕ್ಕೆ ನೀಡಿ ವಿದ್ಯಾರ್ಥಿಗಳು ಬ್ಯಾಂಡ್ ಸೆಟ್ ಮುಖಾಂತರ ಅವರನ್ನು ಸ್ವಾಗತಿಸಲಾಯಿತು.<br></td></tr>
</table>




ಉದ್ಘಾಟನೆಯ ನಂತರ ಆದ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಿಂದ ಉದ್ಘಾಟನಾ ಭಾಷಣ ಮಾಡಿ, ಮಕ್ಕಳಿಗೆ ಕಾರ್ಯಕ್ರಮದ ಉದ್ದೇಶವನ್ನು ತಿಳಿಸಿದರು.

ಮೇಜರ್.ಶ್ರೀ.ಸಂಜಯ್ ಸಿಂಗ್ ಜಮ್ವಾಲ್ ರವರು ಪ್ರಸ್ತುತ ಪ್ಯಾರಾ ರೆಜಿಮೆಂಟ್ ತರಬೇತಿ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಜಮ್ಮು ಕಾಶ್ಮೀರದ ಉದ್ದಾಂಪುರದ ಮಧ್ಯಮ ಕುಟುಂಬದಲ್ಲಿ ಜನಿಸಿದ ಇವರು 2011 ರಲ್ಲಿ ಡೆಹ್ರಾಡೂನಿನ ಮಿಲಿಟರಿ ಅಕಾಡೆಮಿಗೆ ಸೇರಿದರು. 2015 ರಲ್ಲಿ ವಾಯುರಕ್ಷಣಾ ಘಟಕಕ್ಕೆ ನಿಯೋಜನೆಯಾಗಿಸೇವೆ ಸಲ್ಲಿಸಿದ್ದರು. ಲೇಹ್ ಉಪ ಉಷ್ಣವಲಯದಲ್ಲಿ ನಡೆದ Snow Leopard ಮತ್ತು Rakshaak. ಕಾರ್ಯಾಚರಣೆ ಯಲ್ಲಿ ಸಲ್ಲಿಸಿದ ವಿಶೇಷ ಸೇವೆಗೆ ಶೌರ್ಯಪ್ರಶಸ್ತಿಗೆ ಭಾಜನರಾದರು.
Major Sri.Sanjay Singh Jamwal from 4para SF, presently posted in Para Regimental Training Centre.
He is basically from Udhampur, Jammu & Kashmir. He belonging to middle class family did his schooling from APS Udhampur. He then joined Indian Air Force as Technician, cleared army Cadet College exam and joined Indian Military Academy, Dehradun in 2011.
He got commissioned at Army Air Defence Unit in June 2015. He also has volunteered for probation in 4 Para SF and got marroned. He has served in extreme terrains of Jammu Kashmir which includes areas along line of control in Kupwara, Baramula, & Uri sectors and Hinterland areas of Kashmir Valley.
He has contributed majorly in Leh sub-sector during operation Snow Leopard. He has been rewarded for the services during his tenure. He was given Gallantry Award of Mention n Dispatches for Operation Snow Leopard and Sena Medal for Operation Rakshaak.

ಅನಂತರ ವಿದ್ಯಾರ್ಥಿಗಳೊಂದಿಗೆ ಮೇಜರ್ ರವರು ಮಿಲಿಟರಿಯಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು ಹಾಗೂ ಮಿಲಿಟರಿಗೆ ಸಂಬಂಧಿಸಿದ ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಿದರು. ಸುಮಾರು ಒಂದುವರೆ ಗಂಟೆ ಈ ಸಂವಾದ ಕಾರ್ಯಕ್ರಮ ನಡೆಯಿತು.








ಸಂವಾದ ಕಾರ್ಯಕ್ರಮದ ನಂತರ ಶ್ರೀ.ಸಂಜಯ್ ಸಿಂಗ್ ಜಮ್ವಾಲ್ ರವರನ್ನು ಸನ್ಮಾನಿಸಲಾಯಿತು. ಅವರೊಂದಿಗೆ ಆಗಮಿಸಿದ್ದ ಶ್ರೀ.ಕಿಶೋರ್ ರವರನ್ನು ಸಹ ಸನ್ಮಾನಿಸಲಾಯಿತು.

